# ಅರ್ಧ ಮನುಷ್ಯನ ಅದ್ಭುತ!







**ಅಪಘಾತದಲ್ಲಿ ಈತ ಉಳಿದದ್ದೇ ವಿಸ್ಮಯ. ಅರ್ಧ ದೇಹ ಹೊತ್ತುಕೊಂಡು ಸ್ವಾವಲಂಬಿಯಾಗಿ ಬದುಕುತ್ತಿರುವುದು ಇನ್ನೂ ದೊಡ್ಡ ವಿಸ್ಮಯ!**

■ **ಕಿರಣ್ ಪ್ರಸಾದ್ ರಾಜನಹಳ್ಳಿ**

'ಇದೇನಿದು ಅರ್ಧ ಮನುಷ್ಯ?!' ಎಂದು ಆಶ್ಚರ್ಯವಾಗುವುದು ಸಹಜ. ಆದರೆ ಹೀಗೊಬ್ಬ ಮನುಷ್ಯನಿದ್ದಾನೆ! ಈತನಿಗೆ ಇರುವ ದೇಹವೇ ಅರ್ಧ ಭಾಗ! ಈತ ಸೃಷ್ಟಿಯ ವೈಚಿತ್ರ್ಯವಲ್ಲ. ಅಪಘಾತದಲ್ಲಿ ಅರ್ಧ ದೇಹವನ್ನೇ ಕಳೆದುಕೊಂಡು, ಸೃಷ್ಟಿಗೇ ಸವಾಲೆಸೆದು ಬದುಕುತ್ತಿರುವ ಅಪ್ರತಿಮ ಸಾಹಸಿ. ಇಂತಹ ನಿದರ್ಶನ ಪ್ರಪಂಚದಲ್ಲಿ ಇನ್ನೊಂದು ಸಿಗಲಾರದು. ಈತನ ರೋಚಕ ಕತೆ ನಮ್ಮ ನಿಮ್ಮಂತಹವರನ್ನು ನಾಚಿಕೊಳ್ಳುವಂತೆ ಮಾಡುವುದರಲ್ಲಿ ಸಂದೇಹವಿಲ್ಲ. ಈ ಸಾಹಸಿಯ ಯಶೋಗಾಥೆ ಹೀಗೆ ಸಾಗುತ್ತದೆ....

ಈ ಸಾಹಸಿಯ ಹೆಸರು ಪೆಂಗ್ ಶುಲಿನ್. ಚೀನಾ ದೇಶದ ಹುನಾನ್ ಪ್ರಾವಿನ್ಸ್‌ನಲ್ಲಿ ಜನಿಸಿದ ಪೆಂಗ್ ಶುಲಿನ್ ತನ್ನ 24ನೇ ವಯಸ್ಸಿನವರೆಗೂ ಸರ್ವಾಂಗಗಳನ್ನೂ ಹೊಂದಿ ಆರೋಗ್ಯಕರವಾಗಿಯೇ ಇದ್ದ. 1995ರಲ್ಲಿ ಅದೊಂದು ದುರ್ದಿನ, ಅದೊಂದು ಕರಾಳ ಕ್ಷಣ. ಪೆಂಗ್ ಶುಲಿನ್ ದಕ್ಷಿಣ ಚೀನಾದ ಶೆನ್‌ಝೆನ್ ನಗರದ ರಸ್ತೆಯಲ್ಲಿ ಸಂಚರಿಸುತ್ತಿದ್ದಾಗ ಬೃಹತ್ ಟ್ರಕ್ ಒಂದರ ಅಪಘಾತಕ್ಕೆ ಸಿಲುಕಿದ. ಆ ಟ್ರಕ್ ಇವನ ಮೇಲೆ ಎಷ್ಟು ನಿರ್ದಯವಾಗಿ ಹಾದು ಹೋಯಿತೆಂದರೆ ಪೆಂಗ್‌ನ ದೇಹ ಎರಡು ಭಾಗವಾಯ್ತು! ಸೊಂಟದವರೆಗೆ ಮಾತ್ರ ಉಳಿದ ದೇಹ. ಬದುಕುಳಿಯುವುದು ಸಾಧ್ಯವೆ?! ಆದರೆ ಪೆಂಗ್ ಶುಲಿನ್ ಜೀವಂತವಾಗುಳಿದ. ಅಷ್ಟೇ ಅಲ್ಲ, ಇಂದೂ ಸಹ ಜೀವಿಸುತ್ತಲೇ ಇದ್ದಾನೆ. ಪ್ರಕೃತಿಗೇ ಬಿಡ್ ಕಟ್ಟಿ ಜೀವನ ನಡೆಸುತಿದ್ದಾನೆ! ಅಪಘಾತ ನಡೆದ ಕ್ಷಣದಿಂದಲೂ ಇಂದಿನ ದಿನದವರೆಗೂ ನಡುವೆ ಇರುವ ಸಮಯವಿದೆಯಲ್ಲಾ... ಅದು ಘೋರ, ಭೀಕರ! ಅಂತಹ ಹಿಂಸಾತ್ಮಕ ಕ್ಷಣಗಳನ್ನು ಹಾದು ಇಂದು ಮಂದಹಾಸ ಬೀರುತ್ತಾ ಬದುಕುತ್ತಿದ್ದಾನೆಂದರೆ ಪೆಂಗ್‌ನ ಮನಸ್ಸಿನ ದೃಢತೆ ಅದೆಷ್ಟು ಶಕ್ತಿಶಾಲಿಯಾಗಿರಬಹುದು!

ಪೆಂಗ್‌ಗೆ ಅಪಘಾತವಾಗಿ ಅರ್ಧ ದೇಹ ಇಲ್ಲದಂತಾದಾಗ ಎಲ್ಲರೂ ಅವನು ಬದುಕುಳಿಯುವ ಆಸೆಯನ್ನೇ ಬಿಟ್ಟಿದ್ದರು. ಆದರೂ ಅವನ ಅರ್ಧದೇಹದಲ್ಲಿ ಉಸಿರು ಹರಿದಾಡುತ್ತಿದ್ದುದರಿಂದ ಶೆನ್‌ಝೆನ್‌ನಲ್ಲಿರುವ ಆಸ್ಪತ್ರೆಗೆ ಸೇರಿಸಲಾಯಿತು. ಆಗಲೂ ಸಹ ಅವನ ಪರಿವಾರದವರೆಲ್ಲಾ ಅಂತಿಮ ಕ್ಷಣಗಳ ನಿರೀಕ್ಷೆಯಲ್ಲಿಯೇ ಇದ್ದರು. ಆದರೆ ಪವಾಡವೆಂಬಂತೆ ಪೆಂಗ್‌ನ ಉಸಿರು ನಿಲ್ಲಲೇ ಇಲ್ಲ. ಉಸಿರು ನಿಲ್ಲಲು ಅವನ ಮನಸ್ಸು ಬಿಡಲಿಲ್ಲ. ಜೀವಿಸುವ ಛಲ ಪ್ರಕೃತಿಯನ್ನೂ ಸೋಲಿಸಿತು. ದೃಢ ಮನಸ್ಸಿನ ಫಲವೊಂದರಿಂದಲೇ ಪೆಂಗ್ ಬದುಕಿದ.

ವೈದ್ಯಕೀಯ ಲೋಕವನ್ನೇ ವಿಸ್ಮಯಗೊಳಿಸಿ ಜೀವಂತವಾಗುಳಿದ ಪೆಂಗ್‌ನ ಅರ್ಧ ದೇಹಕ್ಕೆ ಅನೇಕ ಬಗೆಯ ಆಪರೇಷನ್‌ಗಳನ್ನು ಮಾಡಬೇಕಾಯ್ತು. ತಲೆಯ ಚರ್ಮವನ್ನು ತೆಗೆದು ಅವನ ಸೊಂಟದ ಭಾಗವನ್ನು ರಿಪೇರಿ ಮಾಡಬೇಕಾಯ್ತು! ಶೆನ್‌ಝೆನ್‌ನ ಆಸ್ಪತ್ರೆಯಲ್ಲಿದ್ದ ವೈದ್ಯರಿಗೆಲ್ಲಾ ಪ್ರಯೋಗ ವಸ್ತುವಾಯಿತು ಪೆಂಗ್‌ನ ಅರ್ಧ ದೇಹ. ಪೆಂಗ್‌ನನ್ನು ಉಳಿಸಿಕೊಳ್ಳಲು ವೈದ್ಯರ ಪಡೆ ದೊಡ್ಡ ಸಮರವನ್ನೇ ನಡೆಸಿತು.

ಎಲ್ಲದಕ್ಕಿಂತ ಹೆಚ್ಚಿಗೆ, ಪೆಂಗ್ ಜೀವಿಸಲೇ ಬೇಕೆಂದು ಪಣತೊಟ್ಟಿದ್ದ. ಅಪಘಾತವಾದಂದಿನಿಂದಲೂ ಹದಿಮೂರು ವರ್ಷಗಳಷ್ಟು ದೀರ್ಘಕಾಲ ಪೆಂಗ್ ಸಾವಿನ ವಿರುದ್ಧ ಹೋರಾಟ ನಡೆಸಿ ಗೆದ್ದ. ಇಂದು ಪೆಂಗ್ ತನ್ನ ಅರ್ಧ ದೇಹದಲ್ಲೇ ಆರೋಗ್ಯವಾಗಿದ್ದಾನೆ. ಸೊಂಟದವರೆಗೆ ಮಾತ್ರ ಇರುವ ದೇಹದಲ್ಲೇ ಜೀವಿಸುತ್ತಾ ವಿಜಯದ ನಗೆಯನ್ನು ಬೀರುತ್ತಿದ್ದಾನೆ. ಆಸ್ಪತ್ರೆಯ ವೈಸ್‌ಪ್ರೆಸಿಡೆಂಟ್ ಲಿನ್ ಲು ರವರು, 'ಅರ್ಧ ದೇಹವಿಲ್ಲದಿರುವುದು ಬಿಟ್ಟರೆ ಈಗ ಪೆಂಗ್ ಸಂಪೂರ್ಣ ಗುಣಮುಖನಾಗಿದ್ದಾನೆ. ಅವನ ವಯಸ್ಸಿನ ಬೇರೆ ವ್ಯಕ್ತಿಗಳಿಗಿಂತಲೂ ಹೆಚ್ಚು ಆರೋಗ್ಯಪೂರ್ಣವಾಗಿದ್ದಾನೆ. ಅವನಿಗೆ ಒಳ್ಳೆಯ ಚಿಕಿತ್ಸೆ ಸಿಕ್ಕಿದ್ದು ನಿಜ. ಆದರೆ ಅವನು ಬದುಕುಳಿದ ರಹಸ್ಯವೇನೆಂದರೆ ಅವನಲ್ಲಿದ್ದ ದೃಢತೆ, ಜೀವನ ಪ್ರೀತಿ. ಬದುಕಲೇ ಬೇಕೆಂಬ ಹಂಬಲ ಅವನಿಗೆ ಅದ್ಭುತ ಶಕ್ತಿಯನ್ನು ನೀಡಿತು. ಅವನ ಮನಸ್ಸಿನ ಶಕ್ತಿಯ ಮುಂದೆ ವಿಧಿಯ ಯಾವ ಆಟವೂ ನಡೆಯಲಿಲ್ಲ' ಎಂದು ಹೇಳುತ್ತಾರೆ.

ಈಗ ಪೆಂಗ್‌ಗೆ ಮೂವತ್ತೇಳು ವರ್ಷ. ಕಾಲುಗಳಿಲ್ಲದ ಕಾರಣ ತನ್ನ ಕೈಗಳನ್ನೇ ಚಲನೆಗೆ ಬಳಸುತ್ತಾನೆ. ಚೀನಾದ ಪುನರ್‌ಜೋಡಣ ಸಂಶೋಧನಾ ಕೇಂದ್ರವು ಪೆಂಗ್ ನಡೆದಾಡಲಿಕ್ಕಾಗಿ ವಿಶೇಷವಾದ ಕಾಲುಗಳನ್ನು ರಚಿಸಿತು. ಆದರೂ ಪೆಂಗ್ ಚಲನೆಗೆ ತನ್ನ ಕೈಗಳನ್ನೇ ಹೆಚ್ಚಾಗಿ ಬಳಸುತ್ತಾನೆ.

ಪೆಂಗ್‌ನ ಕತೆ ಇಷ್ಟೇ ಆಗಿದ್ದರೆ ಪೆಂಗ್ ಈಗಲೂ ಕೂಡ ಸಾಮಾನ್ಯ ಮನುಷ್ಯನೇ ಆಗುತ್ತಿದ್ದ. ಆದರೆ ಅವನ ಹಿರಿಮೆ ಇರುವುದು ಮುಂದಿನ ಹೆಜ್ಜೆಗಳಲ್ಲಿ! ಅಂಗವಿಕಲನೆಂದು ಪೆಂಗ್ ಸುಖಾಸುಮ್ಮನೆ ದಿನಗಳನ್ನು ತಳ್ಳುತ್ತಿಲ್ಲ. ವೈದ್ಯಕೀಯ ಲೋಕದ ಅಚ್ಚರಿಯಾಗಿರುವ ಅವನನ್ನು ಸಾಕಲು ಇಡೀ ಚೀನಾ ದೇಶವೇ ಸಿದ್ಧವಾಗಿತ್ತು. ಅವನು ಉಸಿರಾಡುವುದೇ ತಮ್ಮ ದೇಶದ ಬೆರಗಿನ ಆಸ್ತಿಯೆಂದು ಚೀನಾ ಭಾವಿಸಿತ್ತು. ಹಾಗಾಗಿ ಪೆಂಗ್ ಅಂಗವಿಕಲತೆಯ ಅನುಕಂಪದಲ್ಲೇ ಸುಖಮಯ ಜೀವನವನ್ನು ಕಳೆಯಬಹುದಿತ್ತು. ಆದರೆ ಪೆಂಗ್ ಹಾಗೆ ಮಾಡಲಿಲ್ಲ. ಸ್ವಾಭಿಮಾನದ ಬದುಕು ಸಾಗಿಸಲು ಪ್ರಯತ್ನಿಸಿದ. ಅಂಗಡಿಯೊಂದನ್ನು ತೆರೆದು ವ್ಯಾಪಾರ ಮಾಡಿ ಜೀವನ ನಡೆಸತೊಡಗಿದ. ಅವನು ಪ್ರಾರಂಭಿಸಿದ ಅಂಗಡಿ ಇಂದು ಹಾಫ್ ಮ್ಯಾನ್–ಹಾಫ್ ಪ್ರೈಸ್ ಸ್ಟೋರ್ ಎಂಬ ಸೂಪರ್ ಮಾರ್ಕೆಟ್ ಆಗಿ ವಿಜೃಂಭಿಸುತ್ತಿದೆ.

ಈಗ ನೀವೇ ಹೇಳಿ– ಅಷ್ಟೊಂದು ಅಂಗಗಳನ್ನು ಕಳೆದುಕೊಂಡು, ಅಷ್ಟೊಂದು ಆಪರೇಷನ್‌ಗಳನ್ನು ಮಾಡಿಸಿಕೊಂಡಿದ್ದರೂ ಕಷ್ಟಪಟ್ಟು ದುಡಿಯುತ್ತಾ ಹೆಮ್ಮೆಯ ಜೀವನ ನಡೆಸುತ್ತಿರುವ ಪೆಂಗ್ ಅದೆಷ್ಟು ಕೋಟಿ ಜನರಿಗೆ ಮಾದರಿಯಾಗಬಹುದು! ಕೈಕಾಲು ಕಬ್ಬಿಣದ ಹಾಗಿದ್ದರೂ ಇತರರನ್ನು ವಂಚಿಸುತ್ತಾ, ಸುಲಿಗೆ ಮಾಡುತ್ತಾ, ನ್ಯಾಯವಾಗಿ ದುಡಿಯಲಾಗದೆ ಸೋಂಬೇರಿಗಳಾಗಿ, ಸಮಾಜಕ್ಕೆ ಹೊರೆಯಾಗಿ ಬದುಕುವವರು ಪೆಂಗ್‌ನ ಕತೆಯನ್ನೊಮ್ಮೆ ಓದಲೇಬೇಕು.